# ಸಾರಥಿ-4 ಸಾಫ್ಟ್‌ವೇರ್ ನ ಮೂಲಕ ಆನಲೈನ್ ನಲ್ಲಿ ನೂತನ ಚಾಲನಾ ಅನುಜ್ಞಾ ಪತ್ರಿಕೆ (Driving License) ಅರ್ಜಿ ಸಲ್ಲಿಸುವ ವಿಧಾನ

1. https://parivahan.gov.in ವೆಬ್ಸೈಟ್ ಗೆ ಭೇಟಿ ನೀಡಿ, “Online Services” ಆಯ್ಕೆ ಮಾಡಿ ಅದರಲ್ಲಿ “Driving License Related Services” ಅನ್ನು ಆಯ್ಕೆ ಮಾಡಿ,




2. ನಂತರ ಮುಂದಿನ ಪುಟದಲ್ಲಿ “Karnataka” ರಾಜ್ಯವನ್ನು ಆಯ್ಕೆ ಮಾಡಿ.



3. ನಂತರ "Apply Online" ಅನ್ನು ಆಯ್ಕೆ ಮಾಡಿ, ಅದರಲ್ಲಿ "New Driving License" ಅನ್ನು ಆಯ್ಕೆ ಮಾಡಿ.




4. "New Driving License" ಆಯ್ಕೆ ಮಾಡಿದ ನಂತರ, ಆನ್ ಲೈನ್ ಅರ್ಜಿಯಲ್ಲಿ ವಿವರ ಭರ್ತಿ ಮಾಡಿ ಸ್ವೀಕೃತಿಯನ್ನು ಮುದ್ರಿಸಿ,

5. ಅನಂತರ, "DL Test Slot Booking" ಪುಟದಲ್ಲಿ, ಚಾಲನಾ ಅನುಜ್ಞಾ ಪತ್ರ ಪರೀಕ್ಷೆಗಾಗಿ ದಿನಾಂಕ ಮತ್ತು ವೇಳೆಯನ್ನು ನಿಗದಿ ಪಡಿಸಿಕೊಳ್ಳಿ.

6. ನಂತರ ಇಂಟರ್ನೆಟ್ ಬ್ಯಾಂಕ್ ಸೌಲಭ್ಯ ಹೊಂದಿದ್ದಲ್ಲಿ, "Payment of fee" ಆಯ್ಕೆಯ ಮೂಲಕ ಆನಲೈನ್ ಮೂಲಕ ಶುಲ್ಕ ಪಾವತಿಸಿ, ರಸೀತಿ ಮುದ್ರಿಸಿಕೊಳ್ಳಿ. ಆನಲೈನ್ ಶುಲ್ಕ ಪಾವತಿ ಸೌಲಭ್ಯ ಹೊಂದಿಲ್ಲದಿದ್ದಲ್ಲಿ, ಕಛೇರಿ ನಗದು ಶಾಖೆಯಲ್ಲಿ ಶುಲ್ಕ ಪಾವತಿಸಬಹುದು.

7. ನಂತರ ಗೊತ್ತು ಪಡಿಸಿದ ದಿನಾಂಕದಂದು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಭೇಟಿ ನೀಡಿ, ಮುದ್ರಿಸಿದ ಸ್ವೀಕೃತಿ ಪತ್ರ ಹಾಗೂ ಆನಲೈನ್ ಶುಲ್ಕ ರಸೀತಿ (ಆನ್ ಲೈನ್ ನಲ್ಲಿ ಪಾವತಿಸಿದ್ದಲ್ಲಿ) ಹಾಜರುಪಡಿಸಿ. ಆನಲೈನ್ ಶುಲ್ಕ ಪಾವತಿ ಸೌಲಭ್ಯ ಹೊಂದಿಲ್ಲದಿದ್ದಲ್ಲಿ, ಕಛೇರಿ ನಗದು ಶಾಖೆಯಲ್ಲಿ ಶುಲ್ಕ ಪಾವತಿಸಿ ರಸೀತಿ ಹಾಜರು ಪಡಿಸಬೇಕು. ಯಾವುದೇ ಮುದ್ರಿತ ಅರ್ಜಿ ಅಥವಾ ದಾಖಲೆಗಳ ಪ್ರತಿಯನ್ನು (photo copies) ಸಲ್ಲಿಸುವ ಅಗತ್ಯವಿರುವುದಿಲ್ಲ

8. ಅಧಿಕಾರಿಗಳು ವಿವರಗಳನ್ನು ಪರಿಶೀಲಿಸಿದ ನಂತರ ವಾಹನ ಚಾಲನಾ ಪರೀಕ್ಷೆಗೆ ಹಾಜರಾಗಿ.

**ಸೂಚನೆ:**

1. **ವೆಬ್ಸೈಟ್ ನಲ್ಲಿ ಸಂಬಂಧಿಸಿದ ಪುಟಗಳಲ್ಲಿ ಪ್ರದರ್ಶಿಸಿರುವಂತೆ ಸೂಚನೆಗಳನ್ನು ಅನುಸರಿಸಿ**
2. **ಹೆಚ್ಚಿನ ವಿವರಗಳಿಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಿ.**